ದರಖಾಸ್ತು ಜಮೀನುಗಳು

225 (599) ಶ್ರೀ ವಿ.ಆರ್. ಕೃಷ್ಣಮೂರ್ತಿ, (ಸಂತೇಮರಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿ ವ್ಯಾಪ್ತಿಯ 13 ಕಾಲೋನಿಗಳಲ್ಲಿ 8 ಕಾಲೋನಿಗಳ ಹದ್ದುಬಸ್ತು ಕಾರ್ಯ ಪೂರ್ಣಗೊಂಡಿದ್ದು, ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಕೆಲಸ ಬಾಕಿ ಇದ್ದು ಈವರೆವಿಗೂ ಕೆಲಸ ಪೂರ್ಣಗೊಂಡಿದೆಯೇ? ಪೂರ್ಣಗೊಂಡಿದ್ದಲ್ಲಿ ಫಲಾನುಭವಿಗಳಿಗೆ ಹದ್ದುಬಸ್ತು ಮಾಡಿರುವ ಬಗ್ಗೆ ದಾಖಲೆ ನೀಡಲಾಗಿದೆಯೇ? ಅದರ ವಿವರ ನೀಡುವುದು?

ಆ) ಇವುಗಳ ಪೈಕಿ ಉಳಿದ ಕಾಲೋನಿಗಳ ಹದ್ದುಬಸ್ತು ಕಾರ್ಯವನ್ನು ಯಾವಾಗ ಮಾಡಲಾಗುವುದು? ಸುಮಾರು 37 ವರ್ಷಗಳ ಹಿಂದೆಯೇ ಜಮೀನು ಮಂಜೂರಾಗಿದ್ದರೂ ಈವರೆವಿಗೂ ಹದ್ದುಬಸ್ತು ಕಾರ್ಯವನ್ನು ಪೂರ್ಣಗೊಳಿಸದಿರಲು ಕಾರಣವೇನು? ಅದರ ವಿವರ ನೀಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ)1. ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿ ವ್ಯಾಪ್ತಿಯ 13 ಕಾಲೋನಿಗಳ ಪೈಕಿ 8 ಕಾಲೋನಿಗಳ ಅಳತೆ ಕೆಲಸ ಪೂರ್ಣಗೊಂಡಿರುತ್ತದೆ.

2. ಅಳತೆ ಆದ 8 ಕಾಲೋನಿಗಳ ಪೈಕಿ ಚಿಕ್ಕಮೂಡಹಳ್ಳಿ ಗ್ರಾಮದ ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ತಯಾರಿಸಿ ದುರಸ್ತಿ ಪಡಿಸಲಾಗಿದೆ ಹಾಗೂ ಕೋರಿಕೆ ಅರ್ಜಿಗಳು ಬಂದಂತೆ ದಾಖಲೆಗಳನ್ನು ಪೂರೈಸಲಾಗುವುದು.

ಉಳಿದ 7 ಕಾಲೋನಿಗಳು (1) ದೊಡ್ಡಮೂಡಹಳ್ಳಿ (2) ರಂಗಸಂದ್ರ (3) ಕೋಳಿ ಪಾಳ್ಯ (4) ವೀರಯ್ಯನಪುರ (5) ಬಿಜ್ಜಲಪಾಳ್ಯ (6) ಬಾನವಾಡಿ (7) ಗೋಡೆಮಡು (ಮೂಕನಪಾಳ್ಯ) ಇವುಗಳ ಅಳತೆ ಕೆಲಸ ಪೂರ್ಣಗೊಂಡಿದ್ದು ತಾಲ್ಲೂಕು ಕಛೇರಿಯಿಂದ ಕ್ರಮ ಹಾಗೂ ಕೆಲವು ದಾಖಲೆಗಳ ಅವಶ್ಯಕತೆ ಇದ್ದುದರಿಂದ ತಾಲ್ಲೂಕು ಕಛೇರಿಗೆ ದಾಖಲೆಗಳ ಪೂರೈಕೆ ಹಾಗೂ ತಿದ್ದುಪಡಿ ಆದೇಶಕ್ಕೆ ಕಳುಹಿಸಲಾಗಿದೆ.

ಈ ಬಗ್ಗೆ ಅಗತ್ಯ ಮಾಹಿತಿಯನ್ನು ತಾಲ್ಲೂಕು ಕಛೇರಿಯಿಂದ ಪಡೆದು, ದುರಸ್ತಿ ಕ್ರಮ ಪೂರೈಸಿ ಫಲಾನುಭವಿಗಳಿಗೆ ನಿಯಮಾನುಸಾರ ದಾಖಲೆಗಳನ್ನು ಪೂರೈಸಲಾಗುವುದು.

ಆ) ಉಳಿದ ಗ್ರಾಮಗಳಾದ ಮೂಡಹಳ್ಳಿ, ಕನ್ನೇರಿ ಕಾಲೋನಿ, ಫಾರೆಸ್ಟ್ ಪ್ಲಾಂಟೇಷನ್, ಕ್ಯಾತೇ ದೇವರಗುಡಿ, ಕಾಳಿಕಾಂಬ ಕಾಲೋನಿ ಇವುಗಳ ಮಂಜೂರಾತಿ ಪೋಡಿ ಕಡತಗಳನ್ನು ತಾಲ್ಲೂಕು ಕಛೇರಿಯಿಂದ ಸಹಾಯಕ ನಿರ್ದೇಶಕರ ಕಛೇರಿಗೆ ಕಳುಹಿಸಲು ತಹಸೀಲ್ದಾರರವರಿಗೆ ತಿಳಿಸಲಾಗಿದೆ. ಕಡತಗಳನ್ನು ಪಡೆದು ಆಧ್ಯತೆಯ ಮೇರೆಗೆ ಕೆಲಸವನ್ನು ಪ್ರಾರಂಭಿಸಲಾಗುವುದು.